ವಿಷಯ:- ಮಾಸಾಶನ ಪಡೆಯುತ್ತಿರುವ ಕಲಾವಿದರ ಸಂಖ್ಯೆ.

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ ೨೧:- (೨೬೦)
ಶ್ರೀ ಆರ್. ದಯಾನಂದರಾವ್ (ಗಾಂಧಿನಗರ)
ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಸಾಶನ ಪಡೆಯುತ್ತಿರುವ ಕಲಾವಿದರ ಸಂಖ್ಯೆ ಎಷ್ಟು? (ಹೆಸರು ಮತ್ತು ಮಾಸಾಶನ ಮೊತ್ತದ ಎವರ ನೀಡುವುದು)
ಆ) ಇದರಲ್ಲಿ ಮಾಸಾಶನ ಪಡೆಯುತ್ತಿರುವ ಕೆಲವರ ಆದಾಯ ಮತ್ತು ಇತರೆ ಕಾರಣಗಳಿಂದ ಅರ್ಹರಲ್ಲದವರು ಮಾಸಾಶನ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
ಇ) ಹಾಗಿದ್ದಲ್ಲಿ ಅಂತಹ ಕಲಾವಿದರ ಮಾಸಾಶನವನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದೇ ಮತ್ತು ಇತರರಿಗೆ ಮಾಸಾಶನದರವನ್ನು ಹೆಚ್ಚಿಸಲಾಗುವುದೆ?

ಶ್ರೀ ಹೆಚ್. ವಿಶ್ವನಾಥ್
(ಕನ್ನಡ ಮತ್ತು ಸಂಸ್ಕೃತಿ ಸಚಿವರು)

೩೭೭೧.
ಲಗತ್ತಿಸಿದೆ.
ಬಂದಿದೆ.
ಹೌದು.
ಮಾಸಾಶನ ದರವನ್ನು ಹೆಚ್ಚಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ:- ಮುಖ್ಯಮಂತ್ರಿಗಳಿಂದ ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೨೨:- (೨೭೯)
ಶ್ರೀ ಆರ್. ದಯಾನಂದರಾವ್ (ಗಾಂಧಿನಗರ)
ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ದೂರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೯೨ರ ಅಂತ್ಯದಲ್ಲಿ ಸಿ.ಎ.ಸು.ಇ. ನಿಂದ ಮತ್ತು ಮುಖ್ಯಮಂತ್ರಿಗಳಿಂದ ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ.
ಆ) ಅವುಗಳಲ್ಲಿ ವಿಲೇವಾರಿಯಾದ ಸಂಖ್ಯೆ
ಇ) ಅವುಗಳ ವಿವಿಧ ಇಲಾಖೆಗಳಿಗೆ ವರದಿಗಾಗಿ ಕಳುಹಿಸಿರುವ ಸಂಖ್ಯೆ (ಇಲಾಖಾವಾರು ಅಂಕಿಗಳನ್ನು ಕೊಡುವುದು)
ಈ) ಉತ್ತರಿಸಿರುವ ಇಲಾಖೆಗಳ ಸಂಖ್ಯೆ ಮತ್ತು ಇನ್ನು ಉತ್ತರ ಬರಬೇಕಾಗಿರುವ ಇಲಾಖೆಗಳ ಸಂಖ್ಯೆ
ಉ) ಅರ್ಜಿಗಳಿಗೆ ಉತ್ತರ ಕೊಡದೇ ಇರುವ ಮತ್ತು ವಿಲೇವಾರಿ ಮಾಡದೇ ಇರುವ ಇಲಾಖೆಗಳ ವಿರುದ್ಧ ಉದ್ದೇಶಿಸಿರುವ ಕ್ರಮ

ಶ್ರೀ. ಪೆರಿಕಲ್ ಎಂ. ಮಲಪ್ಪ
(ಪ್ರವಾಸೋದ್ಯಮ ಮತ್ತು ಸಾರ್ವಜನಿಕ ದೂರು ಸಚಿವರು)